ದಾವೆ -33/2014 ಡಿಡಬ್ಲ್ಯೂ-3

ದಿನಾಂಕ : 21-10-2020 ರಂದು ಸಾಕ್ಷಿದಾರನನ್ನು ಪುನಃ ಕರೆಯಿಸಿ ಪ್ರಮಾಣಿಕರಿಸಲಾಯಿತು.

**ಪಾಟಿ ಸವಾಲು : ವಾದಿ ಪರ ವಕೀಲರಿಂದ**

ನಾನು ಸುಲ್ತಾನಪೂರು ಗ್ರಾಮದನು ಎಂದು ತೋರಿಸಲು ನ್ಯಾಯಾಲಯಕ್ಕೆ ಆಧಾರ ಚೀಟಿ, ಗುರುತಿನ ಚೀಟಿ ಹಾಜರು ಮಾಡಿರುವುದಿಲ್ಲ. ಈ ದಾವೆಯನ್ನು ಯಾರು ಯಾರ ಮೇಲೆ ಹಾಕಿರುತ್ತಾರೆ ಎಂದರೆ ಸಾಕ್ಷಿ ಗಿರಿಯಮ್ಮ ಇವಳು ಹಾಕಿರುತ್ತಾಳೆ ಅಂತ ಹೇಳುತ್ತಾರೆ. ನಿಮಗೆ ಮೃತ ರಾಜಶೇಖರ ಪರಿಚಯ ಹೇಗೆ ಇರುತ್ತದೆ ಎಂದರೆ ಆತನು ನಮ್ಮ ಊರಿನವನು ಇರುವುದರಿಂದ ಪರಿಚಯ ಎಂದು ಹೇಳುತ್ತಾರೆ. ರಾಜಶೇಖರ ನಮ್ಮ ಊರನ್ನು ಬಿಟ್ಟು ಎಷ್ಟು ವರ್ಷ ಆಗಿರುತ್ತದೆ ಎಂದರೆ ಸಾಕ್ಷಿ 40 ವರ್ಷ ಆಗಿರುತ್ತದೆ ಅಂತ ಹೇಳುತ್ತಾರೆ. ಕಳೆದ 40 ವರ್ಷಗಳಿಂದ ಆತನು ರಾಯಚೂರಿನ ಹೆಚ.ಆರ್.ಬಿ ಲೆಔಟಿನಲ್ಲಿ ವಾಸ ಮಾಡುತ್ತಿದ್ದ ಎಂದರೆ ಸರಿ. ನಮ್ಮ ಊರಿನ ಜನಸಂಖ್ಯೆ 1200 ಇರುತ್ತದೆ. ನಿನಗೆ ಊರಿನಲ್ಲಿ ಯಾರು ಎಷ್ಟು ಓದಿರುತ್ತಾರೆ ಗೊತ್ತಿರುತ್ತದೆಯೇ ಎಂದರೆ ನನಗೆ ಗೊತ್ತಿರುತ್ತದೆ ಎಂದು ಹೇಳುತ್ತಾರೆ. ರಾಜಶೇಖರ ಎಲ್ಲಿ ಓದಿರುತ್ತಾನೆ ಎಂದರೆ ಸಾಕ್ಷಿ ಗಬ್ಬೂರಿನಲ್ಲಿ ಓದಿರುತ್ತಾನೆ ಅಂತ ಹೇಳುತ್ತಾರೆ. ಎಷ್ಟನೇ ತರಗತಿವರೆಗೆ ಅಲ್ಲಿ ಓದಿರುತ್ತಾನೆ ಅಂತ ನನಗೆ ಗೊತ್ತಿಲ್ಲ. ಗಬ್ಬೂರು ಹೊರತು ಪಡಿಸಿ ಬೇರೆ ಕಡೆ ಎಲ್ಲಿ ಓದಿರುತ್ತಾನೆ ಅಂತ ನನಗೆ ಗೊತ್ತಿಲ್ಲ. ರಾಜಶೇಖರನು 1990 ರಲ್ಲಿ ಏನು ಕೆಲಸ ಮಾಡುತ್ತಿದ್ದ ಎಂರದೆ ಸಾಕ್ಷಿ ಕಂಟ್ರಕ್ಟ ಕೆಲಸ ಮಾಡುತ್ತಿದ್ದ ಅಂತ ಹೇಳುತ್ತಾರೆ. ಆತನಿಗೆ ಯಾವುದಾದರೂ ಪರವಾನಿಗೆ ಇತ್ತೆ ಅದನ್ನು ನೀನು ನೋಡಿರುತ್ತಿಯ ಎಂದರೆ ಸಾಕ್ಷಿ ನೋಡಿರುತ್ತೇನೆ ಅಂತ ಹೇಳುತ್ತಾರೆ.

ನನಗೆ ರಾಜಶೇಖರ ತಮ್ಮ ಗುರುಸ್ವಾಮಿ ಗೊತ್ತು. ಅವರಿಬ್ಬರೂ ಒಂದೇ ಕಡೆ ಇದ್ದು ಕಂಟ್ರಕ್ಟ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ ರಾಜಶೇಖರ ಒಬ್ಬನೇ ಕಂಟ್ರಕ್ಟ ಕೆಲಸ ಮಾಡುತ್ತಿದ್ದ ಅಂತ ಹೇಳುತ್ತಾರೆ. ಗುರುಸ್ವಾಮಿ ಏನು ಕೆಲಸ ಮಾಡುತ್ತಿದ್ದ ಎಂದರೆ ಆತನು ರಾಜಶೇಖರ ಕಛೇರಿಯಲ್ಲಿ ಕೂಡುತ್ತಿದ್ದ ಅಂತ ಹೇಳುತ್ತಾರೆ. ಗುರುಸ್ವಾ ಮಿಯು ಕಛೇರಿಯಲ್ಲಿ ರಾಜಶೇಖರ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದ ಎಂದರೆ ಸರಿ. ನನಗೆ ವಾದಿ ಗೊತ್ತು. ವಾದಿಯು ಕಿರಾಣಿ ಅಂಗಡಿ ನಡೆಸುತ್ತಿದ್ದಳು ಎಂದರೆ ಸರಿ.

<u>ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ಕಾಲವಕಾಶವನ್ನು ಕೋರಿರುತ್ತಾರೆ ಕಾಲವಕಾಶವನ್ನು ನೀಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತ್ಯಲೇಖನೆ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಇದೆ ಅಂತಾ ಒಪ್ಪಿಕೊಂಡಿರುತ್ತಾರೆ.)

1 ನೇ ಹೆಚ್ಚುವರಿ ಹಿರಿಯ ಸಿವಿಲ್
ನ್ಯಾಯಾಧೀಶರು, ರಾಯಚೂರು